***Form No.4.***

***Deposition Sheet( R.P.52)***

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC :11/2024**

**CW10**

**PW8**

ಸಾಕ್ಷಿಯ ಹೆಸರು : ರಮಾನಂದ

ತಂದೆ ಹೆಸರು : ರಾಮ ನಾಯಕ್

ಪ್ರಾಯ : 37 ವರ್ಷ

ಉದ್ಯೋಗ : ಗಾರೆ ಕೆಲಸ

ವಾಸ : ಚಿಕ್ಕಲ್ ಬೆಟ್ಟು

ದಿನಾಂಕ **: 14.03.2025** ರಂದು ಪಿಡಬ್ಲ್ಯೂ - 8/ಸಿಡಬ್ಲ್ಯೂ - 10 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನನಗೆ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದ್ದು, ಸದರಿ ಮಹಜರನ್ನು ನಿಪಿ - 9 ಎಂದು, ನನ್ನ ಸಹಿಯನ್ನು ನಿಪಿ - 9(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಫೋಟೋದಲ್ಲಿ ನಾನು ಕೂಡಾ ಇದ್ದು, ಫೋಟೋವನ್ನು ನಿಪಿ - 10

ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಠಾಣೆಯಲ್ಲಿ ಮಾಡಿದ್ದು, ಫೋಟೋವನ್ನು ಫ್ಯಾಕ್ಟರಿ ಬಳಿ ತೆಗೆಯಲಾಗಿದೆ. ಈಗ ಸ್ವತ್ತು ಸ್ವಾಧೀನತಾ ಮಹಜರನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡ ಕಾರಣ ನಿಪಿ - 11 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ - 11(ಎ) ಎಂದು ಹಾಗೂ ಮತ್ತೊಂದು ಫೋಟೋದಲ್ಲಿ ನಾನು ಇದ್ದೇನೆ ಎಂದು ಒಪ್ಪಿಕೊಂಡ ಕಾರಣ ಫೋಟೋವನ್ನು ನಿಪಿ - 12 ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದು, ಫೋಟೋವನ್ನು ಠಾಣೆಯಲ್ಲಿ ತೆಗೆಯಲಾಗಿದೆ. ನಿಪಿ - 9 ಮತ್ತು ನಿಪಿ - 11 ರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಪೋಲೀಸರು ಗೇರುಬೀಜದ ಚೀಲಗಳನ್ನು ಹಾಜರುಪಡಿಸಿದ್ದು, ಅದನ್ನು ಠಾಣೆಯಲ್ಲಿ ನೋಡಿರುತ್ತೇನೆ. ಯಾವ ಉದ್ದೇಶಕ್ಕಾಗಿ ನನ್ನ ಸಹಿ ಪಡೆದಿದ್ದಾರೆ ಮತ್ತು ಫೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ತಿಳಿದಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಹಿರಿಯ ಸ.ಸ.ಅ. ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 17.11.2020 ರಂದು ನನ್ನನ್ನು ಮತ್ತು ಚಾಸಾ 11 ರವರನ್ನು ಪೋಲೀಸರು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಪೋಲೀಸರಿಗೆ ತಮ್ಮ ಜೊತೆ ಬಂದಲ್ಲಿ ತಾವು ಕಳ್ಳತನ ಮಾಡಿದ ಸ್ಥಳವನ್ನು ತೋರಿಸುವುದಾಗಿ ಹೇಳಿದ ಕಾರಣ, ಪೋಲೀಸರು ಮತ್ತು ನಮ್ಮನ್ನು 1 ಮತ್ತು 2 ನೇ ಆರೋಪಿತರು ಚಾಸಾ 6 ರವರ ಗೇರುಬೀಜದ ಫ್ಯಾಕ್ಟರಿಗೆ ಕರೆದುಕೊಂಡು ಹೋದರು ಎಂದರೆ ಸರಿ. ಸದರಿ ಫ್ಯಾಕ್ಟರಿಯಲ್ಲಿ ತಾವು ಕಳ್ಳತನ ಮಾಡಿದ ಸ್ಥಳ ಇದೇ ಎಂದು ತೋರಿಸಿ, ನಿಪಿ -10 ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸರಿ. ನಂತರ ನಿಪಿ - 9 ರಂತೆ ಸಂಜೆ 5 ರಂತೆ 5.45 ರವರೆಗೆ ಮಹಜರನ್ನು ಬರೆದು, ಅದನ್ನು ಓದಿ ಹೇಳಿ, ನಾವು ಒಪ್ಪಿದ ನಂತರ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿ.

ದಿಃ 06.11.2020 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಅಲ್ಲಿ ಗೇರುಬೀಜದ ಚೀಲಗಳನ್ನು ಚಾಸಾ 14 ರವರು ಹಾಜರುಪಡಿಸಿದ ಮೇರೆಗೆ ಅವುಗಳನ್ನು ತೋರಿಸಿ, ನಿಪಿ - 11 ರಂತೆ ಮಧ್ಯಾಹ್ನ 2 ರಿಂದ 2.30 ರವರೆಗೆ ಮಹಜರು ತಯಾರಿಸಿ, ನಿಪಿ - 12 ರಂತೆ ಫೋಟೋ ತೆಗೆದಿದ್ದಾರೆ

CC 11/2024
CW10
PW8

ಎಂದರೆ ಸರಿ. ನಮ್ಮನ್ನು ಫ್ಯಾಕ್ಟರಿಗೆ ಕರೆದುಕೊಂಡು ಹೋದ ಇಬ್ಬರು ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ.

ಪಾಟೀ ಸವಾಲುಃ ಶ್ರೀ ಪಿ.ಎ.ಎಸ್. 1 ನೇ ಆರೋಪಿತರ ಪರ ವಕೀಲರಿಂದಃಪಿ

ಅಜೆಕಾರು ಪೋಲೀಸರು ಪೋಲೀಸ್ ಠಾಣೆಯಲ್ಲಿ ಇದ್ದಂತಹ ಗೇರುಬೀಜಗಳನ್ನು ಯಾರು ಹಾಜರುಪಡಿಸಿದ್ದು, ಎಲ್ಲಿಂದ ಹಾಜರುಪಡಿಸಿದ್ದಾರೆ ಮತ್ತು ಅವುಗಳು ಯಾರಿಗೆ ಸೇರಿದ್ದು ಎಂದು ನನಗೆ ತಿಳಿದಿಲ್ಲ. ಗೇರುಬೀಜಗಳನ್ನು ತೋರಿಸಿದ್ದು, ಸಹಿ ಹಾಕಲು ಹೇಳಿದ ಕಾರಣ ನಾನು ಸಹಿ ಹಾಕಿದ್ದೇನೆ. ನಾನು ಪ್ರವೀಣ್ ಆಳ್ವ ರವರ ಗೇರುಬೀಜ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿಗೆ ಪೋಲೀಸರು ಇಬ್ಬರನ್ನು ಕರೆದುಕೊಂಡು ಬಂದಿದ್ದರು. ಆ ಸಮಯದಲ್ಲಿ ನಾನು ಅಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಸಹಿ ಹಾಕಲು ಬರಲು ತಿಳಿಸಿದ್ದರು ಎಂದರೆ ಸರಿ. ಹಾಗೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ. ಹಾಗೆ ಫೋಟೋಗಾಗಿ ನಿಲ್ಲಲು ಹೇಳಿದ ಕಾರಣ ನಾನು ಫೋಟೋದಲ್ಲಿ ನಿಂತಿದಿದ್ದೇನೆ. ಆರೋಪಿತರನ್ನು ಯಾವ ಕಾರಣಕ್ಕಾಗಿ ಕರೆತರಲಾಯಿತು ಮತ್ತು ಯಾವ ಕಾರಣಕ್ಕಾಗಿ ಫೋಟೋ ತೆಗೆಯಲಾಯಿತು ಎಂದು ನನಗೆ ತಿಳಿದಿಲ್ಲ. ಮಹಜರುಗಳಲ್ಲಿ ಅಂದರೆ ನಿಪಿ - 9 ಮತ್ತು ನಿಪಿ - 11 ರಲ್ಲಿ ಏನು ಬರೆದಿದೆ

ಎಂದು ನನಗೆ ತಿಳಿದಿಲ್ಲ. ಪೋಲೀಸರು ಕರೆದುಕೊಂಡು ಬಂದ ಕಾರಣ ಆರೋಪಿತರನ್ನು ಗುರುತಿಸಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲುಃ</u> 2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.